ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ಗೃಹ ಲಕ್ಷ್ಮಿ ಬೆಳೆ ಸಾಲ ಯೋಜನೆಯ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-

142 (144+77) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2019-2020ನೇ ಸಾಲಿನಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರ ಆಭರಣಗಳ ಮೇಲೆ ಶೇಕಡಾ 3ರ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸಲು "ಗೃಹಲಕ್ಷ್ಮಿ ಬೆಳೆ" ಸಾಲ ಯೋಜನೆ ಜಾರಿಗೊಳಿಸಿರುವುದು ನಿಜವೇ ; ಜಾರಿಗೊಳಿಸಿದ್ದಲ್ಲಿ, ಸರ್ಕಾರಿ ಆದೇಶ ಸಂಖ್ಯೆ : ಸಿಒ 58 ಸಿ.ಎಲ್.ಎಸ್. 2019, ದಿನಾಂಕ: 21-02-2019ರ ಆದೇಶದ ಪ್ರತಿ ಹಾಗೂ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು;

(ಆ) "ಗೃಹ ಲಕ್ಷ್ಮಿ ಬೆಳೆ" ಸಾಲ ಯೋಜನೆಯಡಿ ಇದುವರೆಗೂ ಎಷ್ಟು ಫಲಾನುಭವಿಗಳಿಗೆ ಸಾಲ ನೀಡಲಾಗಿರುತ್ತದೆ ; ಪ್ರತಿ ಜಿಲ್ಲಾ ಸಹಕಾರಿ ಬ್ಯಾಂಕುವಾರು ಸಂಪೂರ್ಣ ಸಾಲ ವಿತರಣಾ ಮಾಹಿತಿಯನ್ನು ನೀಡುವುದು :

(ಇ) ಈ "ಗೃಹ ಲಕ್ಷ್ಮಿ ಬೆಳೆ" ಸಾಲ ಯೋಜನೆಯನ್ನು ಜಾರಿಗೊಳಿಸದಿರುವ ಬ್ಯಾಂಕುಗಳು ಯಾವುವು ಮತ್ತು ಈ ಬ್ಯಾಂಕುಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)